**ಕರ್ನಾಟಕ ಸರ್ಕಾರ**
**ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್,**
**# 70, 2ನೇ ಮಹಡಿ, ಕೆ.ಎಂ.ಸಿ. ಬಿಲ್ಡಿಂಗ್, ಬಸವನಗುಡಿ ಪೋಸ್ಟ್ ಆಫೀಸ್ ಎದುರು, ಕೆ.ಆರ್. ರಸ್ತೆ,**
**ಬಸವನಗುಡಿ, ಬೆಂಗಳೂರು-560 004**
**ಇ-ಮೇಲ್ : yeshtrust@gmail.comದೂರವಾಣಿ: 080-26671616**

ಸಂಖ್ಯೆ:ಯಶಸ್ವಿನಿ/ವಿನಿ-1/ಗೈಡ್‌ಲೈನ್ಸ್-147/2017-18 ದಿನಾಂಕ:14-08-2017

## ಸುತ್ತೋಲೆ

**ವಿಷಯ: ಯಶಸ್ವಿನಿ ಯೋಜನೆಗೆ ಸಂಬಂಧಿಸಿದಂತೆ ನೆಟ್‌ವರ್ಕ್ ಆಸ್ಪತ್ರೆಗಳು ಪಾಲಿಸಬೇಕಾದ ಮಾರ್ಗಸೂಚಿಗಳು**

* * *

ಯಶಸ್ವಿನಿ ಯೋಜನೆಯ ಮ್ಯಾನೇಜ್‌ಮೆಂಟ್ ಸಪೋರ್ಟ್ ಸರ್ವಿಸ್ ಏಜೆನ್ಸಿಯಾಗಿ ದಿನಾಂಕ 01-08-2017 ರಿಂದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (SAST) ಕಾರ್ಯನಿರ್ವಹಿಸುತ್ತಿದೆ. ಇದುವರೆಗೆ ಕಾರ್ಯನಿರ್ವಹಿಸುತ್ತಿರುವ ನೆಟ್‌ವರ್ಕ್ ಆಸ್ಪತ್ರೆಗಳು SASTಗೆ ಪ್ರೀ-ಆಥ್ ಸಲ್ಲಿಸುವಾಗ ಜಾರಿಯಲ್ಲಿರುವ ನಿರ್ದೇಶನಗಳನ್ನು ಪಾಲಿಸದೇ ಇರುವುದು ವರದಿಯಾಗಿದೆ. ಇದರಿಂದ ಪ್ರೀ-ಆಥ್ ಅನುಮೋದನೆಯಲ್ಲಿ ವಿಳಂಬವಾಗುವುದರಿಂದ, ಹಲವಾರು ಯಶಸ್ವಿನಿ ಫಲಾನುಭವಿಗಳಿಗೆ ತೊಂದರೆಯಾಗಿರುವುದು ತಿಳಿದುಬಂದಿದೆ. ಆದುದರಿಂದ ನೆಟ್‌ವರ್ಕ್ ಆಸ್ಪತ್ರೆಗಳು ಕಡ್ಡಾಯವಾಗಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದೆ.

**ಮಾರ್ಗಸೂಚಿಗಳು:**

- ಯಶಸ್ವಿನಿ ಫಲಾನುಭವಿಗಳು ಆಸ್ಪತ್ರೆಗೆ ದಾಖಲಾದ ತಕ್ಷಣವೇ ತಪ್ಪದೇ ಪ್ರೀ-ಆಥ್ ಅನುಮೋದನೆಗಾಗಿ (**ತುರ್ತು ಪ್ರಕರಣಗಳನ್ನು ಹೊರತುಪಡಿಸಿ**) ಕಳುಹಿಸತಕ್ಕದ್ದು.

- ಪ್ರೀ-ಆಥ್ ಅನ್ನು ಸಲ್ಲಿಸುವಾಗ ಕಡ್ಡಾಯವಾಗಿ ಯಶಸ್ವಿನಿ ಕಾರ್ಡ್, ಪ್ರಸಕ್ತ ಸಾಲಿನ ರಶೀದಿ, ಫಲಾನುಭವಿಯ ಆದಾರ್ ಕಾರ್ಡ್, ಭಾವಚಿತ್ರ ಮತ್ತು ಭರ್ತಿಮಾಡಿದ ಪ್ರೀ-ಆಥ್ ನಮೂನೆಯನ್ನು ವೈದ್ಯರ ಸಹಿ ಮತ್ತು ಆಸ್ಪತ್ರೆಯ ಮೊಹರಿನೊಂದಿಗೆ ಸಲ್ಲಿಸತಕ್ಕದ್ದು.

- ಯಶಸ್ವಿನಿ ಯೋಜನೆಯಡಿ ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು ಎಂಪ್ಯಾನೆಲ್ ಆಗಿರುವ ಎಲ್ಲಾ ವಿದಧ ವೈದ್ಯಕೀಯ ವಿಭಾಗದಲ್ಲಿ (medical disciplines) ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರ ವಿವರ ಹಾಗೂ ದಾಖಲಾತಿಗಳನ್ನು SAST ಪೋರ್ಟನಲ್ಲಿ ಅಪ್‌ಲೋಡ್ ಮಾಡಿ ಮ್ಯಾಪಿಂಗ್ ಆಗಿರಬೇಕು. ತಜ್ಞವೈದ್ಯರ ವಿವರಗಳನ್ನು ಅಪ್‌ಲೋಡ್ ಮಾಡದೇ ಇದ್ದ ಪಕ್ಷದಲ್ಲಿ ಅಂತಹ ಪ್ರಕರಣಗಳಲ್ಲಿ ಪ್ರೀ-ಆಥ್ ಅನುಮೋದನೆಯನ್ನು ನೀಡಲು ಸಾಧ್ಯವಾಗದು.

- ಯಶಸ್ವಿನಿ ಯೋಜನೆಯಡಿ ಗುರುತಿಸಿರುವ 823 ಶಸ್ತ್ರಚಿಕಿತ್ಸೆಗಳಿಗೆ ಪ್ರೀ-ಆಥ್‌ಅನ್ನು ಪಡೆಯಲು ಒಂದು ಅಥವಾ ಹೆಚ್ಚು ಪ್ರೀಆಪರೇಟಿವ್ ಇನ್ವೆಸ್ಟಿಗೇಷನ್ (pre-operative investigations) ರಿಪೋರ್ಟಗಳನ್ನು ನಿಗದಿಪಡಿಸಲಾಗಿದೆ. ಆದರೆ ಹಲವಾರು ಆಸ್ಪತ್ರೆಗಳು ಪ್ರೀ-ಆಥ್‌ಅನ್ನು ಕಳುಹಿಸುವಾಗ ನಿಗದಿಪಡಿಸಿರುವ ಇನ್ವೆಸ್ಟಿಗೇಷನ್ ರಿಪೋರ್ಟಗಳನ್ನು ಅಪ್‌ಲೋಡ್ ಮಾಡದೇ ಇರುವುದರಿಂದ ಪ್ರೀ-ಆಥ್ ಅನುಮೋದನೆಯನ್ನು ನೀಡಲು ಸಾಧ್ಯವಾಗದೇ ಇರುವ ಬಗ್ಗೆ/ವಿಳಂಬ ಆಗಿರುವ ಬಗ್ಗೆ ವರದಿಯಾಗಿದೆ. ನಿಗದಿಪಡಿಸಿರುವ ಪ್ರೀಆಪರೇಟಿವ್ ಇನ್ವೆಸ್ಟಿಗೇಷನ್ ಅನ್ನು ಆಸ್ಪತ್ರೆಯು ಕೈಗೊಳ್ಳದೇ ಇರುವುದರಿಂದ/ಅಪ್‌ಲೋಡ್ ಮಾಡದೇ ಇರುವುದರಿಂದ ಪ್ರೀ-ಆಥ್ ತಿರಸ್ಕೃತಗೊಂಡ ಪ್ರಕರಣಗಳಲ್ಲಿ ಆಯಾ ಆಸ್ಪತ್ರೆಯು ವೈಯಕ್ತಿಕವಾಗಿ ಜವಾಬ್ದಾರರಾಗುವುದು. ಇಂತಹ ಪ್ರಕರಣಗಳಲ್ಲಿ ಯಶಸ್ವಿನಿ ಫಲಾನುಭವಿಗಳಿಂದ ಯಾವುದೇ ಹೆಚ್ಚುವರಿ ಮೊತ್ತವನ್ನು ಆಸ್ಪತ್ರೆಯು ಪಡೆಯುವಂತಿಲ್ಲ.

- ಯಶಸ್ವಿನಿ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆಯನ್ನು ನಡೆಸಿದ ನಂತರ ನಿಗದಿಪಡಿಸಿರುವ ಪೋಸ್ಟ್ ಆಪರೇಟಿವ್ ಇನ್ವೆಸ್ಟಿಗೇಷನ್ (post-operative investigations) ರಿಪೋರ್ಟನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು.

- ನೆಟ್‌ವರ್ಕ ಆಸ್ಪತ್ರೆಗಳು ಪ್ರೀ-ಆಥ್ ಅನ್ನು ಕಳುಹಿಸಿದಾಗ, SAST ನಿಯಮಾನುಸಾರ ಅಪ್‌ಲೋಡ್ ಮಾಡಬೇಕಾಗಿರುವ ಕೆಲವು ದಾಖಲೆಗಳನ್ನು ಅಪೇಕ್ಷಿಸಿ "Need more info" ರೂಪದಲ್ಲಿ ಆಸ್ಪತ್ರೆಗಳಿಗೆ ಕಳುಹಿಸಿದಾಗ, ಹಲವಾರು ಆಸ್ಪತ್ರೆಗಳು ಇದಕ್ಕೆ ತಕ್ಷಣವೇ ಪ್ರತಿಕ್ರಿಯಿಸದೇ ವಿಳಂಬ ಧೋರಣೆಯನ್ನು ತೋರುತ್ತಿರುವುದು ವರದಿಯಾಗಿದೆ. ಇದಲ್ಲದೇ ಪ್ರೀ-ಆಥ್ ಅನುಮೋದನೆಯಾಗಿರುವುದಿಲ್ಲ ಎಂದು ಫಲಾನುಭವಿಗಳಿಗೆ ತಿಳಿಸಿ ಅವರಿಂದ ಶಸ್ತ್ರಚಿಕಿತ್ಸೆಯ ವೆಚ್ಚವನ್ನು ನಗದುರೂಪದಲ್ಲಿ ಪಡೆದು ಆಸ್ಪತ್ರೆಯಿಂದ ಬಿಡುಗಡೆ ಮಾಡುತ್ತಿರುವುದು ತಿಳಿದುಬಂದಿದೆ. ಆಸ್ಪತ್ರೆಗಳ ವಿಳಂಬ ಧೋರಣೆಯಿಂದ ಈ ರೀತಿಯ ಸಂದರ್ಭಗಳಿಗೆ ಆಸ್ಪತ್ರೆಗಳು ಅವಕಾಶ ಮಾಡಿಕೊಟ್ಟಿರುವುದು ಕಂಡು ಬಂದಲ್ಲಿ ಅದಕ್ಕೆ ಸಂಬಂಧಿಸಿದ ಮೊತ್ತವನ್ನು ಆಸ್ಪತ್ರೆಗಳ ಕ್ಲೇಂಗಳಿಂದ ಕಡಿತಗೊಳಿಸಿ ಫಲಾನುಭವಿಗಳಿಗೆ ಮರುಪಾವತಿಸಲು ಕ್ರಮಕೈಗೊಳ್ಳಲಾಗುವುದು.

- SAST "Need more info" ರೂಪದಲ್ಲಿ ಅಪೇಕ್ಷಿಸಿರುವ ದಾಖಲೆಗಳನ್ನು ಒಂದೇ ಬಾರಿ ಆಸ್ಪತ್ರೆಗಳು ಅಪಲೋಡ್ ಮಾಡದೇ ಇರುವುದರಿಂದ ಹೆಚ್ಚಿನ ಪ್ರಕರಣಗಳಲ್ಲಿ ಅವಶ್ಯಕವಿರುವ ದಾಖಲೆಗಳನ್ನು ಮಾಹಿತಿಯನ್ನು 2 ರಿಂದ 3 ಬಾರಿ "Need more info" ರೂಪದಲ್ಲಿ ಕೇಳಿ ಪಡೆಯುವ ಸಂದರ್ಭಗಳು ಉಂಟಾಗಿರುವುದು ವರದಿಯಾಗಿದೆ. ಆಸ್ಪತ್ರೆಗಳು "Need more info" ರೂಪದಲ್ಲಿ ಅಪೇಕ್ಷಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಎಲ್ಲಾ ದಾಖಲೆಗಳನ್ನು ಒಮ್ಮೆಲೆ ಅಪ್‌ಲೋಡ್ ಮಾಡಲು ತಿಳಿಸಿದೆ.

- ಮುಂದುವರೆದು ಆರ್ಥೋಪೆಡಿಕ್ಸ್ ಶಸ್ತ್ರಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಪ್ರೀ–ಆಥ್ ಸಲ್ಲಿಸುವಾಗ ಸದರಿ ಪ್ರಕರಣವು MLC/ RTA ಪ್ರಕರಣವಲ್ಲವೆಂದು ಆಸ್ಪತ್ರೆಯ ವೈದ್ಯರು/ಮುಖ್ಯಸ್ಥರು ಆಸ್ಪತ್ರೆಯ ಲೆಟರ್‌ಹೆಡ್‌ನಲ್ಲಿ ದೃಢೀಕರಿಸಿ ಕಡ್ಡಾಯವಾಗಿ ಸಲ್ಲಿಸಬೇಕು.

- ಅಲ್ಲದೇ ಜಾಯಿಂಟ್ ರಿಪ್ಲೇಸ್ಮೆಂಟ್ (Ortho.75) ಶಸ್ತ್ರಚಿಕಿತ್ಸೆಯನ್ನು ಕೈಗೊಳ್ಳುವ ಅನುಮೋದನೆ ಪಡೆದಿರುವ ಆಸ್ಪತ್ರೆಗಳು ಸದರಿ ಶಸ್ತ್ರಚಿಕಿತ್ಸೆಯನ್ನು ಮಾಡಲು ತರಬೇತಿ ಪಡೆದಿರುವ ಪರಿಣಿತ ವೈದ್ಯರಿದಲ್ಲಿ ಮಾತ್ರ ಅದನ್ನು ಕೈಗೊಳ್ಳುವುದು. ಪರಿಣಿತ ವೈದ್ಯರ ವಿವರಗಳನ್ನು ಕಡ್ಡಾಯವಾಗಿ SAST ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದಲ್ಲಿ ಮಾತ್ರ ಪ್ರಿ–ಆಥ್ ಅನ್ನು ಅನುಮೋದನೆ ಮಾಡಲಾಗುವುದು.

- ಹಲವಾರು ಆಸ್ಪತ್ರೆಗಳು ಪ್ರಿ–ಆಥ್‌ಗೆ ಕಳುಹಿಸಿ, SAST ಇಂದ ಅನುಮೋದನೆ ಪಡೆದ ನಂತರ ಏಕಾಏಕಿಯವಾಗಿ ಪ್ರಿ–ಆಥ್ ಅನ್ನು ರದ್ದು ಪಡಿಸಿರುವುದು ಅಂಕಿ ಅಂಶಗಳಿಂದ ಕಂಡು ಬಂದಿದೆ. ಆಸ್ಪತ್ರೆಗಳು ಯಾವುದೇ ಬಲವಾದ ವೈದ್ಯಕೀಯ ಕಾರಣಗಳಿಲ್ಲದೇ ಪ್ರಿ–ಆಥ್ ಅನ್ನು ರದ್ದು ಪಡಿಸುವಂತಿಲ್ಲ.

- ಆಸ್ಪತ್ರೆಗಳು ಪ್ರೀ–ಆಥ್ ಕಳುಹಿಸುವುದಕ್ಕೆ ಸಂಬಂಧಿಸಿದಂತೆ ನ್ಯೂನತೆ/ವಿಳಂಬ/ಮಾನದಂಡಗಳ ಕುರಿತಂತೆ ಏನಾದರೂ ಸಲಹೆಗಳು ಇದ್ದಲ್ಲಿ, ಟ್ರಸ್ಟ್‌ನ ಇ–ಮೇಲ್ ವಿಳಾಸ yeshtrust@gmail.comಗೆ ಕಳುಹಿಸುವುದು.

ಆಸ್ಪತ್ರೆಗಳು ಮೇಲ್ಕಂಡಂತೆ ಸೂಚಿಸಿರುವ ಮಾರ್ಗಸೂಚಿಗಳಲ್ಲದೇ ಜಾರಿಯಲ್ಲಿರುವ ಪ್ರೋಟೊಕಾಲ್ ಗೈಡ್‌ಲೈನ್ಸ್ ಅನ್ನು ಕಡ್ಡಾಯವಾಗಿ ಪಾಲಿಸುವುದು. ಆಸ್ಪತ್ರೆಗಳ ವತಿಯಿಂದ ಯಾವುದೇ ಲೋಪಗಳು ಕಂಡುಬಂದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು.

14/9/2017

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)
ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಟ್ರಸ್ಟ್.

ಪ್ರತಿಯನ್ನು:

1. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಎಲ್ಲಾ ಜಿಲ್ಲೆಗಳ ಯಶಸ್ವಿನಿ ಕೋ–ಆರ್ಡಿನೇಟರ್‌ಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.